ದಿಃ16.11.2022 OS.No.8/2015 PW-1

ದಿಃ16.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ ಬಿ ಕೆ ವಕೀಲರಿಂದಃ

ಪ್ರತಿವಾದಿಗಳು ಏನು ತಕರಾರು ತಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಜಾಗ ನಮಗೆ ಬರಬೇಕು ಎಂದು ಸಲ್ಲಿಸಿದ್ದಾರೆ. ಅಸಲು ದಾವಾ ಸಂಖ್ಯೆ *162/1998* ರಲ್ಲಿ ನಾನು ನನ್ನ ವಿಚಾರಣೆಯನ್ನು ನ್ಯಾಯಾಲಯದ ಮುಂದೆ ನೀಡಿದ್ದೇನೆ. ಈ ಹಂತದಲ್ಲಿ ಅಸಲು ದಾವಾ ಸಂಖ್ಯೆ *162/1998* ರಲ್ಲಿ ನೀಡಿದ್ದ ವಿಚಾರಣೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಡಿ-*3* ಎಂದು ಗುರುತಿಸಲಾಯಿತು. ನಿಡಿ-*1* ರಲ್ಲಿ ಕಾಣುವ ನಮ್ಮ ಮನೆಯ ಉತ್ತರ ದಿಕ್ಕಿಗೆ ಸಂಪು ಇದೆ ಎಂದರೆ ಸರಿ. ನಂತರ ಚನ್ನೇಗೌಡರ ಮನೆ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಪೂರ್ವ ಪಶ್ಚಿಮ *36* ಮೊಳ ಉತ್ತರ ದಕ್ಷಿಣ *18* ಮೊಳ ಎಂದು ನಮೂದು ಮಾಡಿದ್ದೀರಾ, ದಾವೆ ಸಲ್ಲಿಸುವುದಕ್ಕೂ ಮೊದಲು ಅಳತೆ ಮಾಡಿಸಿದ್ದೀರಾ ಎಂದರೆ ಅಳತೆ ಮಾಡಿಸಿಯೇ ಸಲ್ಲಿಸಿದ್ದು ಎಂದು ನುಡಿಯುತ್ತಾರೆ ಅಳತೆ ಯಾರು ಮಾಡಿದರು ಎಂದರೆ ಜಿಲ್ಲಾ ಪಂಚಾಯಿತಿಯವರು ಎಂದು ನುಡಿಯುತ್ತಾರೆ. ಜಿಲ್ಲಾ ಪಂಚಾಯಿತಿಯವರು ಅಳತೆ ಮಾಡಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ದಾವೆಯನ್ನು ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಮುಂಭಾಗದ ಮನೆ ಮಳೆ ಕಾರಣ ಬಿದ್ದು ಹೋಗಿದೆ ಎಂದರೆ ಸರಿ. ಮೊದಲಿಗೆ ಪ್ರತಿವಾದಿಗಳು ಸೀಟ್ ಅನ್ನು ಹಾಕಿಕೊಂಡಿದ್ದರು ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.